## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ , ಇವರು ನಿಯಮ-72 ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

ವಿಷಯ:-

**2006ರಿಂದ ಈಚೆಗೆ ನೇಮಕವಾಗಿರುವ ಶಿಕ್ಷಕರು ಹಾಗೂ ಎಲ್ಲಾ ಸರ್ಕಾರಿ ನೌಕರರಿಗೆ ಜಾರಿಗೆ ತಂದಿರುವ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹೊಸ ಪಿಂಚಣಿ ಯೋಜನೆಯನ್ನು ಸಮರ್ಪಕವಾಗಿ ಇದುವರೆಗೆ ಜಾರಿಗೊಳಿಸಿರುವುದಿಲ್ಲ. ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಇದುವರೆವಿಗೂ ಈ ಯೋಜನೆಯನ್ನು ಜಾರಿಗೊಳಿಸದೆ ಹಲವಾರು ನೌಕರರು ಈಗಾಗಲೇ ನಿವೃತ್ತಿಯಾಗಿದ್ದು, ಜೀವನ ನಡೆಸಲು ತುಂಬಾ ತೊಂದರೆಯಾಗಿದೆ. ಆದ್ದರಿಂದ ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬ ವಿಷಯದ ಬಗ್ಗೆ ಪ್ರಸಾಪಿಸಲಾಗಿದೆ.**

ಉತ್ತರ:-

ದಿನಾಂಕ:01.04.2006 ರ ನಂತರ ನೇಮಕಾತಿ ಹೊಂದಿದ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಸರ್ಕಾರದ ಆದೇಶ ಸಂಖ್ಯೆ: FD (SPL)04 PET 2005, ದಿನಾಂಕ: 31.03.2006ರನ್ವಯ ನೂತನ ಪಿಂಚಣಿ ವ್ಯಾಪ್ತಿಗೆ ಒಳಪಡುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿ ಇ ಎನ್ 2018, ದಿನಾಂಕ:23.06.2018 ರಲ್ಲಿ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿಯನ್ನು ವಿಸ್ತರಿಸಲಾಗಿದೆ.

### ಅನುದಾನಿತ ಸಿಬ್ಬಂದಿಗಳಿಗೆ :

ದಿನಾಂಕ:01.04.2006 ರ ಪಿಂಚಣಿ ನೀತಿಯಲ್ಲಿ ಸರ್ಕಾರಿ ಅನುದಾನಿತ ಶಾಲೆಗಳ ನೌಕರರಿಗೆ ಪಿಂಚಣಿ ಒದಗಿಸುವ ಕುರಿತು ಮೇಲ್ಕಂಡ ಸರ್ಕಾರದ ಆದೇಶದ ಕ್ರಮ ಸಂಖ್ಯೆ: 08ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

...(8) ಸಹಾಯಾನುದಾನ ಶಿಕ್ಷಣ ಸಂಸ್ಥೆಗಳ ನೌಕರರಿಗೆ, ಗೊತ್ತು ಮಾಡಿದ ಪ್ರಯೋಜನ ಪಿಂಚಣಿಯನ್ನು ದಿನಾಂಕ:01.04.2006ರಂದು ಅಥವಾ ಅದರ ತರುವಾಯ ಸೇರುವ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗೆ ನಿಲ್ಲಿಸಿಬಿಡತಕ್ಕದ್ದು. ನೂತನ ನಿಗಧಿತ ವಂತಿಗೆ ಪಿಂಚಣಿ ಯೋಜನೆಯು, ಆಯ್ಕೆಯ ಅವಕಾಶದ ಆಧಾರದ ಮೇಲೆ ನೌಕರನಿಗೆ ಮತ್ತು ನಿಯೋಜಕನಿಗೆ ಅನ್ವಯವಾಗತಕ್ಕದ್ದು ಮತ್ತು ಆಯ್ಕೆಯ ಅವಕಾಶವನ್ನು ಇಬ್ಬರಿಂದಲೂ ಚಲಾಯಿಸತಕ್ಕುದು. ಆದರೆ, ನಿಯೋಜಕರ ವಂತಿಗೆಯನ್ನು ಸಂಬಂಧಪಟ್ಟ ಸಂಸ್ಥೆಗಳು ಭರಿಸತಕ್ಕುದು. ಆದರೆ ರಾಜ್ಯ ಸರ್ಕಾರವಲ್ಲ.

- ಈ ಆದೇಶವು ದಿನಾಂಕ: 01/04/2006ರಿಂದ ಜಾರಿಗೆ ಬಂದಿರುತ್ತದೆ.
- ದಿನಾಂಕ: 01/04/2006ರ ನಂತರ ಅನುದಾನಸಹಿತ ಅನುಮೋದನೆಗೊಂಡ ಅನುದಾನಿತ ಖಾಸಗಿ ಶಾಲೆ/ಕಾಲೇಜುಗಳಲ್ಲಿನ ಸಿಬ್ಬಂದಿಗಳಿಗೆ ಈ ಮೇಲಿನ ನಿಯಮ ಅನ್ವಯವಾಗುತ್ತದೆ.
- ಅನುದಾನಿತ ಸಿಬ್ಬಂದಿಗಳ ಸೇವಾ ಸೌಲಭ್ಯಗಳು ಅನುದಾನಸಹಿತವಾಗಿ ಅನುಮೋದನೆಗೊಂಡ ದಿನಾಂಕದಿಂದ ಅನ್ವಯವಾಗುತ್ತದೆ. ಆದುದರಿಂದ 2006 ರ ಪೂರ್ವದಲ್ಲಿ ಅನುದಾನರಹಿತವಾಗಿ ನೇಮಕಗೊಂಡ ಸಿಬ್ಬಂದಿಗಳು ದಿನಾಂಕ: 01/04/2006ರ ನಂತರ ಅನುದಾನಕ್ಕೆ ಒಳಪಟ್ಟಲ್ಲಿ ಅಂತಹ ಸಿಬ್ಬಂದಿಗಳು ಹೊಸ ಪಿಂಚಣಿ ಯೋಜನೆ (NPS) ವ್ಯಾಪ್ತಿಗೆ ಒಳಪಡುತ್ತಾರೆ.

- ಈ ಪಿಂಚಣಿ ಯೋಜನೆಯು ಸಂಪೂರ್ಣವಾಗಿ ಸ್ವ-ಇಚ್ಛಾ (optional) ನೆಲೆಯಲ್ಲಿ ಜಾರಿಗೊಳಿಸುವುದರಿಂದ ಕಡ್ಡಾಯಗೊಳಿಸಲು ಅವಕಾಶವಿರುವುದಿಲ್ಲ.

ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ಮಾರ್ಪಾಡು ಮಾಡಲು ಸರ್ಕಾರವು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಆಇ 107 ಪಿಇಎನ್ 2018, ದಿನಾಂಕ: 11.12.2018ರಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ವರದಿಯನ್ನು ನಿರೀಕ್ಷಿಸಲಾಗುತ್ತಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

ಸಂಖ್ಯೆ: ಇಪಿ 21 ಎಸ್‌ಓಹೆಚ್ 2020

(ಎಸ್.ಸುರೇಶ್‌ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಹಾಗೂ ಸಕಾಲ ಸಚಿವರು